ಸಿ.ಸಿ.8643/2022 **ಪಿಡಬ್ಲ್ಯೂ - 1**

**ಸಾಕ್ಷಿ ಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 26.03.2025**

**ಮುಂದುವರಿದ ಪಾಟೀ ಸವಾಲುಃ ಶ್ರೀ ಡಿ ಬಿ ಆರೋಪಿ ಪರ ವಕೀಲರಿಂದಃ**

6. ನಿಪಿ-10 ಮತ್ತು 11 ನಮ್ಮ ಅಂಗಡಿಗೆ ಸಂಬಂದಿಸಿದಂತೆ ನಾವೇ ತಯಾರಿಸಿದ್ದೇವೆ ಎಂದರೆ ಸರಿ. ನಿಪಿ-10 ಮತ್ತು 11 ರಲ್ಲಿ ಆರೋಪಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. 2022 ನೇ ಸಾಲಿನಲ್ಲಿ ಗಣಕೀಕೃತ ಬಿಲ್ ಗಳನ್ನು ತಯಾರು ಮಾಡುವ ವ್ಯವಸ್ಥೆ ಇತ್ತು ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರಲ್ಲಿ ತಿದ್ದುಪಡಿ ಮಾಡಲಾಗಿದೆ ಎಂದರೆ ಸಾಕ್ಷಿ ಸ್ವಲ್ಪ ತಿದ್ದುಪಡಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿಪಿ-10 ಮತ್ತು 11 ನ್ನು ಈ ಪ್ರಕರಣಕ್ಕಾಗಿ ತಯಾರು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಜೊತೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ-10 ಮತ್ತು 11 ರಲ್ಲಿ ನಮೂದು ಮಾಡಿರುವ ಸಾಮಾಗ್ರಿಗಳನ್ನು ನಮ್ಮ ಅಂಗಡಿಯಲ್ಲಿ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಹೊಸಕೋಟೆಯಲ್ಲಿ ಬಾಡಿಗೆ ಮನೆಯಲ್ಲಿ ಮಾತ್ರ ವಾಸವಾಗಿದ್ದು, ಅವರಿಗೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

7. ಆರೋಪಿಯು ನನ್ನ ಜೊತೆ ಮೊದಲಿನಿಂದಲೂ ವ್ಯವಹಾರ ಮಾಡುತ್ತಿದ್ದ ಕಾರಣ, ಆತನಿಗೆ ಸಾಲದ ರೂಪದಲ್ಲಿ ವಸ್ತುಗಳನ್ನು ನೀಡಿರುತ್ತೇನೆ. ಆ ರೀತಿ ಆರೋಪಿಯು ನಮ್ಮ ಅಂಗಡಿಯಲ್ಲಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ನಿಪಿ-10 ಮತ್ತು 11 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-10 ಮತ್ತು 11 ನ್ನು ಹೊರತು ಪಡಿಸಿ ಜಿ ಎಸ್ ಟಿ ಪಾವತಿ ಮಾಡಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಈಗಾಗಲೇ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಹೊರತು ಪಡಿಸಿ ನನ್ನ ಆದಾಯದ ಮೂಲದ ಬಗ್ಗೆ ಬೇರೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ರಘು ರವರಿಗೆ ಆರೋಪಿಯು ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಆರೋಪಿಗೂ ಯಾವುದೇ ಪರಿಚಯ ಇರುವುದಿಲ್ಲ, ಆ ಕಾರಣದಿಂದ ಆರೋಪಿ ನನ್ನ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ನನಗೆ ಯಾವುದೇ ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಮಾಡಿ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ಬಡ್ಡಿ ವ್ಯವಹಾರನ್ನು ಮಾಡುವುದಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂದ ಇರುವುದಿಲ್ಲ, ರಘು ರವರ ಮಾತು ಕೇಳಿ ಆರೋಪಿಯನ್ನು ನ್ಯಾಯಾಲಯಕ್ಕೆ ಅಲೆದಾಡಿಸಬೇಕೆಂದು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**

ಸಿ.ಸಿ.8643/2022 **ಪಿಡಬ್ಲ್ಯೂ - 1**

**<u>ಸಾಕ್ಷಿ ಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 04.09.2024</u>**

**<u>ಪಾಟೀ ಸವಾಲು ಃ ಶ್ರೀ ಡಿ ಬಿ ಆರೋಪಿ ಪರ ವಕೀಲರಿಂದ ಃ</u>**

1. ನಾನು ಹೊಸಕೋಟೆ ತಾಲ್ಲೂಕು ಹಸಿಗಾಳ ಎಂಬ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನಗೆ ಇಂಗ್ಲೀಶ್ ಓದಲು ಬರೆಯಲು ಬರುವುದಿಲ್ಲ, ಕನ್ನಡ ಬರುತ್ತದೆ. ಆ ಕಾರಣದಿಂದ ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಯಾವುದೇ ಬಡ್ಡಿ ವ್ಯವಹಾರ ಮಾಡುವುದಿಲ್ಲ. ನಾನು ಟೈರ್ ಶೋ ರೂಂ ನ್ನು ದೇವನಹಳ್ಳಿಯಲ್ಲಿ ಹೊಂದಿರುತ್ತೇನೆ. ಸೂಲಿಬೆಲೆ ರಘು ಎಂಬುವವರು ನನಗೆ ಪರಿಚಯ ಇರುವುದಿಲ್ಲ. ಸದರಿಯವರು ಆರೋಪಿಯ ಸಂಬಂದಿಕರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಹೊಸಕೋಟೆ ತಾಲ್ಲೂಕು ಕೊಳತೂರಿನಲ್ಲಿ ವಾಸವಾಗಿರುತ್ತಾರೆ. ಆ ರೀತಿ ಆರೋಪಿ ನನಗೆ 10-12 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯು ಟ್ರಾನ್ಸ್ ಪೋರ್ಟ್ ವ್ಯವಹಾರ ಅಂದರೆ ಸರಕು ಸಾಗಣೆ ಮಾಡುತ್ತಿರುತ್ತಾರೆ. ಆರೋಪಿ ಎಲ್ಲಿ ಕಚೇರಿ ಹೊಂದಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸರಕು ಸಾಗಣೆ ವ್ಯವಹಾರವನ್ನು ನೊಂದಣಿ ಮಾಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ಆರೋಪಿಗೆ ಟೈರ್ ಗಳನ್ನು ಮಾರಾಟ ಮಾಡಿದ್ದ ಬಗ್ಗೆ ಬಿಲ್ ಕೊಟ್ಟಿದ್ದೇನೆ ಎಂದರೆ ಸರಿ. ಆ ರೀತಿ ನಾನು ಯಾವುದೇ ಬಿಲ್ ನೀಡಿರುವುದಿಲ್ಲ, ಅವುಗಳನ್ನು ನಾನೇ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿರುವ ಹಣದ ಮೊತ್ತವನ್ನು ತಿದ್ದುಪಡಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ನನ್ನ ಅಂಗಡಿಯ ಸೀಲು ಹಾಕಿದ್ದೇನೆ ಎಂದರೆ ಸರಿ. ನಿಪಿ-1 ರಲ್ಲಿ ಬರವಣಿಗೆ ಮತ್ತು ಸಹಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-1 ನ್ನು ಆರೋಪಿ ನನಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚೆಕ್ ನ ಮೇಲೆ ನಮ್ಮ ಅಂಗಡಿಯ ಸೀಲು ಹಾಕುವುದಿಲ್ಲ ಎಂದರೆ ಸಾಕ್ಷಿ ಆರೋಪಿ ನಿಪಿ-1 ನ್ನು ಬರೆದು ನಮ್ಮ ಅಂಗಡಿಯಲ್ಲಿ ಕೊಟ್ಟಿದ್ದ ಕಾರಣ ಆತನ ಎದುರಿನಲ್ಲಿ ಸೀಲು ಹಾಕಿದ್ದೇನೆ ಎಂದು ನುಡಿಯುತ್ತಾರೆ.

3. ಆರೋಪಿ ಟಾಕ್ಸಿ ಚಾಲಕ ಎಂದರೆ ಸರಿಯಲ್ಲ. ಆರೋಪಿ ದಿನ ಕೂಲಿ ನೌಕರನಾಗಿದ್ದು, ಟೆಂಪೋದಲ್ಲಿ ಹೋಗುತ್ತಿದ್ದು, ಯಾವುದೇ ಟ್ರಾನ್ಸ್ ಪೋರ್ಟ್ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ದಿನ ಕೂಲಿ ನೌಕರನಿಗೆ 10 ಲಕ್ಷ ಮೌಲ್ಯದ ವ್ಯವಹಾರ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಯಾವುದೇ ಟೈರ್ ಗಳನ್ನು ಕೊಟ್ಟಿರುವುದಿಲ್ಲ, ಬದಲಾಗಿ ಬಿಲ್ ಗಳನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸರಬರಾಜು ಮಾಡಿದ್ದ ಟೈರ್ ಗಳ ವಿವರವನ್ನು ನಿಪಿ-10 ಮತ್ತು 11 ರಲ್ಲಿ ತಿಳಿಸಿರುತ್ತೇನೆ. ಆ ರೀತಿ ಜನವರಿ 2022 ರ 2 ನೇ ಮತ್ತು 4 ನೇ ವಾರದಲ್ಲಿ ಟೈರ್ ಗಳನ್ನು ಖರೀದಿ ಮಾಡಿರುತ್ತಾರೆ. ಆ ರೀತಿ ಆರೋಪಿತನು ದೇವನಹಳ್ಳಿಯಿದಲೇ ಟೈರ್ ಗಳನ್ನು ಖರೀದಿ ಮಾಡಿರುತ್ತಾನೆ. ಆರೋಪಿತನಿಗೆ 2 ಬಾರಿ ಟೈರ್ ಗಳನ್ನು ಸರಬರಾಜು ಮಾಡಿರುತ್ತೇನೆ. ಆರೋಪಿತನು ಟೈರ್ ಗಳನ್ನು ಖರೀದಿಸಲು ಒಬ್ಬರೇ ಬಂದಿದ್ದರು.

4. ಆರೋಪಿಯು ಯಾವ ವಾಹನದಲ್ಲಿ ಟೈರ್ ಗಳನ್ನು ತೆಗೆದುಕೊಂಡು ಹೋದರು ಎಂದು ನೆನಪಿರುವುದಿಲ್ಲ. ಆರೋಪಿಯ ವಾಹನಕ್ಕೆ ನಮ್ಮ ಅಂಗಡಿಯ ಕೆಲಸಗಾರರು ಟೈರ್ ಗಳನ್ನು ತುಂಬಿಸಿರುತ್ತಾರೆ. ಸಾಮಾನ್ಯವಾಗಿ ವಾಹನ ಸಂಖ್ಯೆಯನ್ನು ಲೆಡ್ಜರ್ ನಲ್ಲಿ ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಬಿಲ್ಲು ಕೊಟ್ಟ ಕಾರಣ ಅದನ್ನು ಬರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ನನ್ನ ಬಳಿ ಯಾವುದೇ ವ್ಯವಹಾರ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸೂಲಿಬೆಲೆ ರಘು ಎಂಬುವವರಿಗೆ ಭದ್ರತೆಗಾಗಿ ನೀಡಿದ್ದ ನಿಪಿ-1 ನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸೂಲಿಬೆಲೆ ರಘು ರವರು ಆರೋಪಿಗೆ 1 ಟೆಂಪೋವನ್ನು ಖರೀದಿ ಮಾಡಿಕೊಟ್ಟಿದ್ದರು, ಅದರ ಭದ್ರತೆಗಾಗಿ ನಿಪಿ-1 ಪಡೆದುಕೊಂಡಿದ್ದರು ಎಂದರೆ

ಸರಿಯಲ್ಲ.

5. ಸೂಲಿಬೆಲೆ ರಘು ರವರು ಆರೋಪಿಯ ಸಂಬಂದಿಕರಾದ ಕಾರಣ ನಿಪಿ-1 ನ್ನು ನನ್ನ ಮೂಲಕ ಹಾಜರು ಪಡಿಸಿ ಈ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ನಾನು ಯಾವುದೇ ಪೋಲಿಸ್ ದೂರು ನೀಡಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಸೃಷ್ಟಿಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ವಾಟಿ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**